**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಕೊಡಗು, ಮಡಿಕೇರಿ (ಕಾರ್ಯ ನಿರ್ವಹಣೆ ವೀರಾಜಪೇಟೆ).**
**ಸ್ಪೆಷಲ್ ಕೇಸ್. ನಂ. 5014/2020**

**ಪ್ರಾಸಾ ಃ 1**

**ಚಾಸಾ ಃ 1**

ಸಾಕ್ಷಿಯ ಹೆಸರು ಃ ರಾಮಾ
ತಂದೆಯ ಹೆಸರುಃ ಪುಟ್ಟಯ್ಯ
ವಯಸ್ಸು ಃ 46 ವರ್ಷ
ವೃತ್ತಿ ಃ ಕೂಲಿ ಕೆಲಸ
ವಿಳಾಸ ಃ ಅಯ್ಯನಕೆರೆ ಗ್ರಾಮ
ದಿಃ 26.09.2022 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ**

1. ಚಾಸಾ 2 ನನ್ನ ಪತ್ನಿ, ಚಾಸಾ 3 ನನ್ನ ಅಣ್ಣ, ಚಾಸಾ 4 ನನ್ನ ಮಗಳು. ಮೃತ ಲಕ್ಷ್ಮಿ ನನ್ನ ಮಗಳು. ನನಗೆ 4 ಜನ ಗಂಡು ಮಕ್ಕಳು ಹಾಗೂ 4 ಜನ ಹೆಣ್ಣು ಮಕ್ಕಳು. ನಾನು ನನ್ನ ಹೆಂಡತಿ ಮಕ್ಕಳೊಂದಿಗೆ ಅಯ್ಯನಕೆರೆಯಲ್ಲಿ ವಾಸವಾಗಿದ್ದೆ. 2 ವರ್ಷದ ಹಿಂದೆ ಜನವರಿಯಲ್ಲಿ ಲಕ್ಷ್ಮಿಯನ್ನು ಹೊರತು ಪಡಿಸಿ ನಾನು, ನನ್ನ ಹೆಂಡತಿ ಮಕ್ಕಳು ತೋರ ಗ್ರಾಮಕ್ಕೆ ಕೆಲಸಕ್ಕೆ ಹೋಗಿರುತ್ತೇವೆ. ನನ್ನ ಮಗಳು ಲಕ್ಷ್ಮಿ ಆಗ ಅಯ್ಯನಕೆರೆಯಲ್ಲೇ ಉಳಿದುಕೊಂಡಳು. ನ್ಯಾಯಾಲಯದ ಮುಂದಿರುವ ಆರೋಪಿ ಆಕೆಯನ್ನು ಹಾಗೂ ಸುಮಾರು 15 ಜನರನ್ನು 4-5 ವರ್ಷಗಳಿಂದ ಜೀಪಿನಲ್ಲಿ ಬಾಳೆಲೆ ಗ್ರಾಮದಲ್ಲಿರುವ ಕಾಫಿ ತೋಟಕ್ಕೆ ಕೆಲಸಕ್ಕೆ ಕರೆದುಕೊಂಡು ಹೋಗುತ್ತಿದ್ದರು.



2. ದಿಃ 03.02.2020 ರಂದು ಅಣ್ಣಯ್ಯ ಎನ್ನುವವರು ನನಗೆ ಫೋನ್ ಮಾಡಿ ಆರೋಪಿಯು ನನ್ನ ಮಗಳು ಲಕ್ಷ್ಮಿಗೆ ವಿಷ ಕುಡಿಸಿದ್ದು ಆಕೆಯನ್ನು ಹನಗೋಡು ಆಸ್ಪತ್ರೆಗೆ ಸೇರಿಸಲಾಗಿದೆ ಎಂದು ಹೇಳಿದರು. ಈ ವಿಚಾರವನ್ನು ಚಾಸಾ 3 ರವರಿಗೆ ನಾನು ಫೋನ್ ಮಾಡಿ ತಿಳಿಸಿದೆ. ಚಾಸಾ 3 ರವರು ಆಸ್ಪತ್ರೆಗೆ ಹೋಗಿ ನನ್ನ ಮಗಳನ್ನು ನೋಡಿರುತ್ತಾರೆ. ದಿಃ 05.02.2020 ರಂದು ನಾನು ಹಾಗೂ ನನ್ನ ಹೆಂಡತಿ, ನನ್ನ ಅಣ್ಣ, ಚಾಸಾ 4 ರವರು ಹನಗೋಡು

ಆಸ್ಪತ್ರೆಗೆ ಹೋಗಿ ಲಕ್ಷ್ಮಿಯನ್ನು ನಾವು ವಿಚಾರಿಸಿದಾಗ ಆಕೆ " 3 ದಿನದಿಂದ ಕೆಲಸಕ್ಕೆ ಹೋಗದೇ ಮನೆಯಲ್ಲಿ ಇದ್ದು, 3 ದಿನ ಕಳೆದ ನಂತರ ಆರೋಪಿಯು ಸುಮಾರು 15 ಜನರನ್ನು ಬಾಳೆಲೆ ಗ್ರಾಮಕ್ಕೆ ಕಾಫಿ ತೋಟಕ್ಕೆ ಜೀಪಿನಲ್ಲಿ ಕರೆದುಕೊಂಡು ಹೋಗಿ ಬಿಟ್ಟು ವಾಪಸ್ಸು ನಮ್ಮ ಮನೆಗೆ ಬಂದು ಆಕೆಯನ್ನು ಜೀಪಿನಲ್ಲಿ ಬಾಳೆಲೆಗೆ ಕರೆದುಕೊಂಡು ಹೋಗಿದ್ದು, 4-5 ವರ್ಷಗಳಿಂದ ನಾನು ಹಾಗೂ ಆರೋಪಿ ಪ್ರೀತಿಸುತ್ತಿದ್ದು ನಂತರ ನನ್ನ ಬಳಿ ನಾನು ನಿನ್ನನ್ನು ಪ್ರೀತಿಸುವುದಿಲ್ಲ, ನೀವು ಜೇನುಕುರುಬರು ನಾನು ಗೌಡ ಸಮುದಾಯಕ್ಕೆ ಸೇರಿದವನು ನಾನು ಬೇರೆ ಹುಡುಗಿಯನ್ನು ಪ್ರೀತಿಸುತ್ತಿದ್ದೇನೆ ಎಂದು ಹೇಳಿದ್ದು, ನಿನ್ನನ್ನು ಸಾಯಿಸಿಯೇ ಬಿಡುತ್ತೇನೆ ಎಂದು ಹೇಳಿ ಆಕೆಯ ಕೈಕಾಲುಗಳನ್ನು ಹಿಡಿದು ಆಕೆಯ ಬಾಯಿಗೆ ಕಳೆ ನಾಶಕ ಔಷಧಿಯನ್ನು ಕುಡಿಸಿದ್ದು ಆಗ ಆಕೆಗೆ ಮಂಕು ಕವಿದಂತೆ ಆಗಿದ್ದು, ಆರೋಪಿಯೇ ಆಕೆಯನ್ನು ಹನಗೋಡು ಆಸ್ಪತ್ರೆಗೆ ದಾಖಲು ಮಾಡಿದ್ದಾರೆ ಎಂದು ನಮ್ಮ ಬಳಿ ಹೇಳಿರುತ್ತಾಳೆ." ಹನಗೋಡು ಆಸ್ಪತ್ರೆಯಲ್ಲಿ ವೈದರು ಇಲ್ಲಿ



ಆಗುವುದಿಲ್ಲ ಎಂದು ಹೇಳಿದ್ದು ನಾವು ಆಕೆಯನ್ನು ಮೈಸೂರಿನ ಕೆ ಆರ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲು ಮಾಡಿರುತ್ತೇವೆ. ದಿಃ 07.02.2020 ರಂದು ಪೊನ್ನಂಪೇಟೆ ಪೊ, ಠಾಣೆಯಲ್ಲಿ ನಾನು ನನ್ನ ಮಗಳು ಲಕ್ಷ್ಮಿಗೆ ಆರೋಪಿ ಕಳೆನಾಶಕ ಕುಡಿಸಿದ್ದಾರೆ ಎಂದು ದೂರು ನೀಡಿದ್ದೆ. ದಿಃ 10.02.2020 ರಂದು ನನ್ನ ಮಗಳು ಮೃತಪಟ್ಟಿರುತ್ತಾಳೆ. ನಾನು ನೀಡಿದ ದೂರನ್ನು ಈಗ ನೋಡುತ್ತಿದ್ದು ಅದನ್ನು ನಿಪಿ 1 ಎಂದು ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ಈಗ ತೋರಿಸಿದ ಛಾಯಾಚಿತ್ರದಲ್ಲಿ ನನ್ನ ಮಗಳ ಮೃತದೇಹ ಕಾಣಿಸುತ್ತಿದೆ. ಸದರಿ ಛಾಯಾಚಿತ್ರವನ್ನು ನಿಪಿ 2 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಪಿ ಪಿ ಯವರು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು)**

## ಪಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರವರಿಂದ

3. ದಿಃ 05.02.2020 ರಂದು ನಾನು ಹನಗೋಡು ಆಸ್ಪತ್ರೆಗೆ ಹೋಗಿ ಲಕ್ಷ್ಮಿಯನ್ನು

ನಾನು, ನನ್ನ ಹೆಂಡತಿ, ನನ್ನ ಅಣ್ಣ ಹಾಗೂ ಮಗಳು ವಿಚಾರಿಸಿದಾಗ, 4-5 ವರ್ಷಗಳಿಂದ ನಾನು ಮತ್ತು ಆರೋಪಿ ಪರಸ್ಪರ ಪ್ರೀತಿಸುತ್ತಿದ್ದು, ಆರೋಪಿ ಬೇರೆ ಹುಡುಗಿಯನ್ನು ಪ್ರೀತಿಸುತ್ತಿದ್ದ ವಿಚಾರ ನನಗೆ ಗೊತ್ತಾಗಿ ಈ ವಿಚಾರನ್ನು ನಾನು ಆರೋಪಿಯ ಬಳಿ ಕೇಳಿದಾಗ

.4.

ಆರೋಪಿ ನನ್ನ ಜೊತೆ ಬಂದಿದ್ದ ಕೆಲಸಗಾರರ ಮುಂದೆಯೇ ಜಗಳ ಮಾಡಿದ್ದನು, ನಂತರ ನಾನು 3 ದಿನಗಳು ಕೆಲಸಕ್ಕೆ ಹೋಗದೇ ಮನೆಯಲ್ಲೇ ಇದ್ದೆನು ಎಂದು ಲಕ್ಷ್ಮಿ ನಮ್ಮ ಮುಂದೆ ಹೇಳಿರುತ್ತಾರೆ ಎಂದರೆ ಸರಿ. ದಿಃ 03.02.2020 ರಂದು ಆರೋಪಿಯು ಕೆಲಸದ ಆಳುಗಳನ್ನು ಬೆಃ 7 ಗಂಟೆಗೆ ಬಾಳೆಲೆ ಕಡೆಗೆ ಕರೆದುಕೊಂಡು ಹೋಗಿ ಬಿಟ್ಟು ವಾಪಸ್ಸು ಬಂದು ಲಕ್ಷ್ಮಿಯವರನ್ನು 9 ಗಂಟೆಗೆ ಆತನ ಜೀಪಿನಲ್ಲಿ ಬಾಳೆಲೆ ಕಡೆಗೆ ಕರೆದುಕೊಂಡು ಹೋಗಿ ನೀನು ನನ್ನ ಪ್ರೀತಿಗೆ ಅಡ್ಡ ಬರುತ್ತೀಯಾ, ನೀನು ಜೇನು ಕುರುಬರ ಜಾತಿಗೆ ಸೇರಿದವಳು, ನಿನ್ನನ್ನು ಮದುವೆಯಾಗುವುದಿಲ್ಲ, ಈ ದಿನ ನಿನ್ನನ್ನು ಸಾಯಿಸದೇ ಬಿಡುವುದಿಲ್ಲ ಎಂದು ಹೇಳಿ ಆತ ತಂದಿದ್ದ ಕಳೆನಾಶಕ ಔಷಧಿಗಳನ್ನು ಲಕ್ಷ್ಮಿಯವರ ಕೈಕಾಲುಗಳನ್ನು ಮೆಟ್ಟಿಕೊಂಡು ಬಲವಂತವಾಗಿ ಕುಡಿಸಿದರು ಎಂದು ಲಕ್ಷ್ಮಿ ಹೇಳಿರುತ್ತಾರೆ ಎಂದರೆ ಸರಿ. ಲಕ್ಷ್ಮಿ ಕೂಗಿಕೊಂಡಾಗ ಆಕೆಯನ್ನು ಆರೋಪಿ ಹನಗೋಡು ಆಸ್ಪತ್ರೆಗೆ ದಾಖಲಿಸಿ ಹೋಗಿರುತ್ತಾರೆ ಎಂದು ಲಕ್ಷ್ಮಿ ನಮ್ಮ ಬಳಿ ಹೇಳಿರುತ್ತಾರೆ ಎಂದರೆ ಸರಿ. ಲಕ್ಷ್ಮಿಯವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ ಆರ್ ಆಸ್ಪತ್ರೆಗೆ ದಾಖಲಿಸಿದಾಗ ಆಕೆ ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

4. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ನಾನು ಕನ್ನಡದಲ್ಲಿ ಸಹಿ ಮಾಡುತ್ತೇನೆ. ನಿಪಿ 1 ದೂರನ್ನು ಪೊಲೀಸರು ಬರೆದಿರುತ್ತಾರೆ, ಅವರ ಹೆಸರು ನನಗೆ ಗೊತ್ತಿಲ್ಲ. ನಿಪಿ 1 ರಲ್ಲಿ ಏನು ಬರೆದಿದೆ ಎಂದು

.5.

ನನಗೆ ಗೊತ್ತಿಲ್ಲ. ಅಣ್ಣಯ್ಯ ನನ್ನ ತಮ್ಮ. ನನಗೆ ಅಣ್ಣಯ್ಯ ಎನ್ನುವ ಸಹೋದರ ಇಲ್ಲ, ನನಗೆ ಅಣ್ಣಯ್ಯ ಎನ್ನುವ ವ್ಯಕ್ತಿ ಫೋನ್ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಬಳಿ ಮೊಬೈಲ್ ಇದೆ, ಅದರ ನಂಬರ್ ನನಗೆ

ಹೇಳಲು ಆಗುವುದಿಲ್ಲ. ನಾನು ತೋರ ಗ್ರಾಮದಲ್ಲಿ ಕಾಫಿ ಕೆಲಸಕ್ಕೆ ಹೋಗಿದ್ದ ಸಂದರ್ಭದಲ್ಲಿ ನನಗೆ ವಾರಕ್ಕೆ ಒಂದು ಬಾರಿ ಸಂಬಳ ನೀಡುತ್ತಿದ್ದರು. ಅವಶ್ಯಕತೆ ಬಿದ್ದಾಗ ಹಣ ಕೇಳಿದರೆ ಸಾಹುಕಾರರು ಕೊಡುತ್ತಿದ್ದರು ಎಂದರೆ ಸರಿ. ದಿಃ 03.02.2020 ರಂದು ಹನಗೋಡು ಆಸ್ಪತ್ರೆಗೆ ಹೋಗಲು ತೊಂದರೆ ಇರಲಿಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ನಾನು 05.02.2020 ರಂದು ಹೋಗಿದ್ದೆ. ನಾನು ಹನಗೋಡು ಆಸ್ಪತ್ರೆಗೆ ಹೋಗಿದ್ದಾಗ ಅಲ್ಲಿ ವೈದ್ಯರು ಇದ್ದರು, ಅಲ್ಲಿ ನನ್ನ ಮಗಳು ಮಾತನಾಡುವ ಸ್ಥಿತಿಯಲ್ಲಿ ಇರದೇ ಇದ್ದ ಕಾರಣ ಆಕೆಯನ್ನು ಮೈಸೂರಿಗೆ ಕರೆದುಕೊಂಡು ಹೋಗುವಂತೆ ಹೇಳಿದ್ದರು ಎಂದರೆ ಸರಿ. ನನ್ನ ಮಗಳು ಲಕ್ಷ್ಮಿ ಆರೋಪಿ ಆಕೆಗೆ ಬಲವಂತವಾಗಿ ಕೀಟ ನಾಶಕ ಔಷಧಿ ಕುಡಿಸಿರುವ ಬಗ್ಗೆ ಹೇಳಿಲ್ಲ ಎಂದರೆ ಸರಿಯಲ್ಲ. ದಿಃ 03.02.2020 ರ ಮೊದಲು ನನಗೆ ಆರೋಪಿಯ ಪರಿಚಯ ಇರಲಿಲ್ಲ ಎಂದರೆ ಸರಿ. ದಿಃ 05.02.2020 ರಂದು ಹನಗೋಡು ಪೊ. ಠಾಣೆಯಲ್ಲಿ ದೂರು ನೀಡಲು ತೊಂದರೆ ಇರಲಿಲ್ಲ. ದಿಃ 05.02.2020 ರ ಪೂರ್ವದಲ್ಲಿ ಪೊಲೀಸರು ಆಸ್ಪತ್ರೆಗೆ ಬಂದು ನನ್ನ ಮಗಳನ್ನು ವಿಚಾರಿಸಿರಲಿಲ್ಲ. ನಾನು ದಿಃ 07.02.2020 ರಂದು ದೂರು ನೀಡಿದ ನಂತರ ಪೊಲೀಸರಿಗೆ ವಿಚಾರ ಗೊತ್ತಾಗಿರುತ್ತದೆ ಎಂದರೆ ಸರಿ. ದಿಃ 05.02.2020 ರಂದು ಹನಗೋಡು



ಆಸ್ಪತ್ರೆಯಲ್ಲಿ ನಾನು, ನನ್ನ ಮಗಳು ಲಕ್ಷ್ಮಿ, ವೈದ್ಯರು ಹಾಗೂ ನನ್ನ ಪತ್ನಿ ಹಾಜರಿದ್ದೆವು. ತಕ್ಷಣ ನಾನು ಹಾಗೂ ನನ್ನ ಪತ್ನಿ ನನ್ನ ಮಗಳನ್ನು ಮೈಸೂರಿನ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಆರೋಪಿಯು 4-5 ವರ್ಷಗಳಿಂದ ನನ್ನ ಮಗಳು ಲಕ್ಷ್ಮಿಯನ್ನು 10-15 ಜನ ಆಳುಗಳೊಂದಿಗೆ ಬಾಳೆಲೆ ಗ್ರಾಮಕ್ಕೆ ಕಾಫಿ ತೋಟದ ಕೆಲಸಕ್ಕೆ ಕರೆದುಕೊಂಡು ಹೋಗುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ನಮ್ಮ ಊರಿನಿಂದ ಬಾಳೆಲೆ ಗ್ರಾಮಕ್ಕೆ ಯಾವತ್ತೂ ಹೋಗಿಲ್ಲ. ನಮ್ಮ ಊರಿನಿಂದ ಬಾಳೆಲೆ ಗ್ರಾಮಕ್ಕೆ ಜೀಪಿನಲ್ಲಿ ಹೋಗಲು ಸುಮಾರು 5 ಗಂಟೆ ಬೇಕಾಗುತ್ತದೆ. ನನ್ನ ಮಗಳಿಗೂ ಆರೋಪಿಗೂ ಯಾವುದೇ ಸಂಬಂಧ ಇರಲಿಲ್ಲ ಹಾಗೂ ಆಕೆಯನ್ನು ಆರೋಪಿ ಯಾವತ್ತೂ ಬಾಳೆಲೆ ಗ್ರಾಮಕ್ಕೆ ಕಾಫಿ ತೋಟದ ಕೆಲಸಕ್ಕೆ ಕರೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. ನನ್ನ ಮಗಳನ್ನು ವಿಚಾರಿಸಿದಾಗ ಆಕೆ ನನ್ನ ಬಳಿ ಆರೋಪಿ ಮತ್ತು ಆಕೆ ಪರಸ್ಪರ ಪ್ರೀತಿಸುತ್ತಿದ್ದು ನಂತರದ ದಿನಗಳಲ್ಲಿ ನೀನು

ಜೇನುಕುರುಬರ ಜಾತಿಯವಳು, ನಿನ್ನನ್ನು ಪ್ರೀತಿಸುವುದಿಲ್ಲ ಎಂದು ಆರೋಪಿ ಆಕೆಯ ಬಳಿ ಹೇಳಿದ್ದರು ಎಂದು ನನ್ನಲ್ಲಿ ನನ್ನ ಮಗಳು ಹೇಳಿಲ್ಲ ಎಂದರೆ ಸರಿಯಲ್ಲ. ಆಕೆಯ ಕೈ ಕಾಲುಗಳನ್ನು ಹಿಡಿದಿಟ್ಟು ಆಕೆಗೆ ಬಲವಂತವಾಗಿ ಕೀಟ ನಾಶಕ ಔಷಧಿಯನ್ನು ಆರೋಪಿ ಕುಡಿಸಿದ್ದಾನೆ ಎಂದು ನಮ್ಮ ಬಳಿ ಆಕೆ ಹೇಳಿಲ್ಲ ಎಂದರೆ ಸರಿಯಲ್ಲ. ಜೇನುಕುರುಬರ ಸಮುದಾಯದ ಸಂಘ ಇದೆ ಎಂದರೆ ಸರಿ. ನಮ್ಮ ಸಂಘದ ಕಡೆಯವರು ಹಾಗೂ ನಾವು ಸೇರಿ ಆರೋಪಿ ಹಾಗೂ ಅವರ



ತಂದೆಯ ಬಳಿ ಈ ಘಟನೆಗೆ ಸಂಬಂಧಪಟ್ಟಂತೆ ಪರಿಹಾರವನ್ನು ಕೇಳಿರಲಿಲ್ಲ. ನನ್ನ ಮಗಳು ಆರೋಪಿ ಆಕೆಯನ್ನು ಹನಗೋಡು ಆಸ್ಪತ್ರೆಗೆ ಕರೆದುಕೊಂಡು ಬಂದು ದಾಖಲು ಮಾಡಿದ್ದಾರೆ ಎಂದು ನಮ್ಮ ಬಳಿ ಹೇಳಿಲ್ಲ ಎಂದರೆ ಸರಿಯಲ್ಲ. ನನ್ನ ಮಗಳು ಬೇರೆ ಕಾರಣಕ್ಕೆ ಕೀಟ ನಾಶಕ ಕುಡಿದ್ದು ಆರೋಪಿಯಿಂದ ಹಣವನ್ನು ವಸೂಲಿ ಮಾಡುವ ಸಲುವಾಗಿ ಆತನ ವಿರುದ್ದ ಸುಳ್ಳು ದೂರು ನೀಡಲಾಗಿದೆ ಎಂದರೆ ಸರಿಯಲ್ಲ. ಮೈಸೂರಿನ ಕೆ ಆರ್ ಆಸ್ಪತ್ರೆಯಲ್ಲಿ ದಾಖಲಿಸಿದ ದಿನದಿಂದ ಆಕೆ ಮೃತಪಡುವವರೆಗೂ ಆಕೆ ಪ್ರಜ್ಞಾಹೀನ ಸ್ಥಿತಿಯಲ್ಲಿ ಇದ್ದರು ಎಂದರೆ ಸರಿ. ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಕೂಡ ಆರೋಪಿಯಿಂದ ಹಣ ವಸೂಲಿ ಮಾಡುವ ಸಲುವಾಗಿ ಜೇನುಕುರುಬರ ಸಂಘದವರ ಮಾತು ಕೇಳಿ ನಾನು ಆರೋಪಿಯ ವಿರುದ್ದ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓಹೇಕೇ ಸರಿ ಇದೆ

Sd/-xxx

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಡಗು-ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ)